**ಓ ಎಸ್ ನಂಃ 156/2020**
**ಪಿ ಡಬ್ಲ್ಯು ಃ 1**

**ದಿಃ 04.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ ಎಸ್ ಎಸ್ ವಕೀಲರಿಂದಃ-**

ವಾದ ಪತ್ರದ ಶೀರ್ಷಿಕೆಯಲ್ಲಿ ನಮೂದು ಮಾಡಿರುವ ವಿಳಾಸದಲ್ಲಿಯೇ ನಾನು ಕಳೆದ 11 ವರ್ಷಗಳಿಂದ ವಾಸವಾಗಿರುತ್ತೇನೆ. ಈ ದಾವೆಯ 1 ನೇ ಪ್ರತಿವಾದಿಯು ನನ್ನ ದೊಡ್ಡಮ್ಮ. 2 ನೇ ಪ್ರತಿವಾದಿಯು ನನ್ನ ದೊಡ್ಡಮ್ಮನ ಮಗ. ಪ್ರತಿವಾದಿಗಳು ತಮ್ಮಿಂದ ಎಷ್ಟು ಹಣವನ್ನು ಸಾಲವಾಗಿ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ರೂ. 5,00,000/- ತೆಗೆದುಕೊಂಡಿದ್ದರು. ಸದರಿ ಸಾಲದ ಭದ್ರತೆಗಾಗಿ ಪ್ರತಿವಾದಿಗಳು ನಿಪಿ1 ರ ಕ್ರಯದ ಕರಾರು ಪತ್ರವನ್ನು ತಮ್ಮ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಪ್ರತಿವಾದಿಗಳು ತಮಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಲದ ಹಣ ಪಾವತಿ ಮಾಡಿರುವುದಿಲ್ಲ ಎಂಬುದಾಗಿ ನಿಪಿ1 ರ ಕ್ರಯದ ಕರಾರು ಪತ್ರದಂತೆ ಕ್ರಯ ಪತ್ರವನ್ನು ಪ್ರತಿವಾದಿಗಳು ಬರೆದುಕೊಡಬೇಕೆಂದು ಪರಿಹಾರವನ್ನು ಕೋರಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುತ್ತೇನೆ. ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಪ್ರತಿವಾದಿಗಳು ತಮಗೆ ಪಾವತಿ ಮಾಡಿದ್ದರು ಸಹ ತಾವು ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಪ್ರತಿವಾದಿಗಳು ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರವನ್ನು ಆಧಾರವಾಗಿಟ್ಟುಕೊಂಡು ತಾವು ಪ್ರತಿವಾದಿಗಳಿಗೆ ಒಂದು ನೋಟಿಸ್ ನ್ನು ಜಾರಿ ಮಾಡಿದ್ದೀರಿ ಎಂದರೆ ಸರಿ. ಸದರಿ ಸಮಯದಲ್ಲಿ ತಮ್ಮ ಬಳಿ ರೂ. 3,60,000/- ಇತ್ತು ಎಂದು ತೋರಿಸಲು ತಾವೇನಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ರ ದಾಖಲಾತಿಯು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ಕಾರಣ ತಾವು ಪ್ರತಿವಾದಿಗಳಿಗೆ ನೋಟಿಸು ಜಾರಿ ಮಾಡುವ ಸಮಯದಲ್ಲಿ ತಮ್ಮ ಬಳಿ ರೂ. 3,60,000/- ಹಣ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಗಳು ತಮಗೆ ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಪಾವತಿ ಮಾಡಿದ್ದರು ಸಹ ಪ್ರತಿವಾದಿಗಳು ಸಾಲದ ಭದ್ರತೆಗಾಗಿ ತಮಗೆ ಬರೆದುಕೊಟ್ಟಿರುವ ನಿಪಿ1 ರ ಕ್ರಯದ ಕರಾರು ಪತ್ರ ದಿಃ 07.03.2018 ರದ್ದು ಮಾಡಿರುವುದಿಲ್ಲ ಸದರಿ ದಾಖಲಾತಿಯನ್ನು ಆಧಾರವಾಗಿಟ್ಟುಕೊಂಡು ಈ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ತಾವು

**ಓ ಎಸ್ ನಂಃ 156/2020**
**ಪಿ ಡಬ್ಲ್ಯು ಃ 1**

ಪ್ರತಿವಾದಿಗಳಿಂದ ಸಾಲದ ಹಣವನ್ನು ಹಿಂಪಡೆದಿದ್ದರು ಸಹ ನಿಪಿ1 ರ ಕ್ರಯದ ಕರಾರು ಪತ್ರವನ್ನು ರದ್ದು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿದ್ದರು ಸಹ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**